ಸಾಕ್ಷಿ ಯನ್ನು ದಿಃ25.03.2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪಿರ್ಯಾದುದಾರರ ಪರ ವಕೀಲರಿಂದ**

1. ನನ್ನ ಊರು ಕಂದೇಗಾಲ. ನಾನು ವ್ಯವಸಾಯ ಮಾಡುತ್ತೇನೆ. ಅದು ಬಿಟ್ಟರೆ ಕೆ.ಎಂ.ಎಫ್ ನಲ್ಲಿ ಪಶು ಕೃತಕ ಗರ್ಭದಾರಣೆ ಕೆಲಸ ಮಾಡುತ್ತೇನೆ. ಅದರಲ್ಲಿ ನಾವು ಕೆಲಸ ಮಾಡಿದಂತೆ ಹಣ ಸಿಗುತ್ತೆ. ಒಂದು ಪಶುವಿಗೆ 20 ರೂಪಾಯಿ ನನಗೆ ಸಿಗುತ್ತದೆ. ದಿನಕ್ಕೆ ಎಷ್ಟು ಆಗುತ್ತದೆ ಎಂದು ಹೇಳಲು ಆಗುವುದಿಲ್ಲ ತಿಂಗಳಿಗೆ ಸುಮಾರು 250 ಪಶುಗಳು ಸಿಗುತ್ತವೆ.
2. ನಮ್ಮ ಜಮೀನು ಇನ್ನೂ ಭಾಗ ಆಗಿಲ್ಲ. ನಾವು 4 ಜನ ಗಂಡು ಮಕ್ಕಳು ಇದ್ದೇವೆ. ಎಲ್ಲರೂ ಒಟ್ಟಿಗೆ ಇದ್ದೇವೆ.
3. ನಮ್ಮ ಕುಟುಂಬದ ವ್ಯವಹಾರಗಳನ್ನು ನಮ್ಮ ತಾಯಿ ಹಾಗೂ ತಮ್ಮಂದಿರು ನೋಡಿಕೊಳ್ಳುತ್ತಾರೆ.
4. ಎಡಿಬಿ ಅಬ್ಬೂರು ಬ್ಯಾಂಕಿನಲ್ಲಿ ನಾವು ಕೃಷಿ ಸಾಲ ಮಾಡುತ್ತೇವೆ. ನಮಗೆ ಬೆಳೆ ಸಾಲ ಕೊಡುತ್ತಾರೆ. ಒಟ್ಟು ಎಷ್ಟು ಕೊಡುತ್ತಾರೆ ಎಂದರೆ, 8-10 ಲಕ್ಷದವರೆಗೆ ಕೊಡುತ್ತಾರೆ.
5. ತಂಬಾಕಿನ ಹಣ ಬ್ಯಾಂಕ್ ಖಾತೆಗೆ ಬರುತ್ತದೆ ಎಂದರೆ ಸರಿ. ನಿಮಗೆ ಹೊರಗಡೆ ಸಾಲ ಮಾಡುವ ಅವಶ್ಯಕತೆ ಇಲ್ಲ ಎಂದರೆ, ನಾವು ಮಾಡುವುದಿಲ್ಲ ಎಂದು ನುಡಿಯುತ್ತಾರೆ.
6. ದೂರುದಾರರು ಹಾಗೂ ಆರೋಪಿ ನನಗೆ ಗೊತ್ತು.
7. ಆರೋಪಿ ಬೆಳ್ತೂರು ಗ್ರಾಮದವರು. ದೂರುದಾರರು ಪಿರಿಯಾಪಟ್ಟಣದವರು.
8. ಆರೋಪಿ ಹಾಗೂ ದೂರುದಾರರ ನಡುವೆ ಆದ ಹಣದ ವ್ಯವಹಾರ ನನಗೆ ಗೊತ್ತಿಲ್ಲ.
9. ಆರೋಪಿ ದೂರುದಾರರ ಬಳಿ ಸಾಲ ಮಾಡಿ ಭದ್ರತೆಗಾಗಿ ನಿಪಿ - 1 ರ ಚೆಕ್ ನೀಡಿದ್ದಾರೆ ಎಂದರೆ ಸರಿಯಲ್ಲ, ಚೀಟಿ ವ್ಯವಹಾರದ ಸಲುವಾಗಿ ನೀಡಿದ ಚೆಕ್ಕು ಎಂದು ನುಡಿಯುತ್ತಾರೆ. ಸದರಿ ಚೀಟಿಗೆ ನಾನು ಸಹ ಕಟ್ಟಿದ್ದೆ, ಕೊನೆಯ ಚೀಟಿ ನಾನು ಪಡೆದಿದ್ದೆ, ಆರೋಪಿ 7 ನೇ ಚೀಟಿ ಕೂಗಿದ್ದರು.
10. ಚೀಟಿ ಮಾಡಿದ ಬಗ್ಗೆ ದಾಖಲೆ ಇವೆಯಾ ಎಂದರೆ ಎಲ್ಲರಿಗೂ ಪುಸ್ತಕ ನೀಡಿದ್ದರು, 12 ವರ್ಷ ಆದ್ದರಿಂದ ಎಲ್ಲಿವೆ ಎಂದು ಗೊತ್ತಿಲ್ಲ. ಸಿಕ್ಕಿದರೆ ಹಾಜರುಪಡಿಸುತ್ತೇನೆ.
11. ಚೀಟಿ ನಡೆಸುತ್ತಿದ್ದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ.

12. ಚೀಟಿ ಪಡೆದ ಬಗ್ಗೆ ನಿಮಗೆ ದಾಖಲೆ ನೀಡಿದ್ದರಾ ಎಂದರೆ, ನಾನು ಕೊನೆಯ ಚೀಟಿ ಪಡೆದ ಕಾರಣ ನನ್ನಿಂದ ಚೆಕ್ ಪಡೆದಿಲ್ಲ, ಆದರೆ ಆರೋಪಿಯಿಂದ ಪಡೆದಿದ್ದಾರೆ.
13. ದೂರುದಾರರು ಯಾವುದೇ ಚೀಟಿ ವ್ಯವಹಾರ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.
14. ಆರೋಪಿ ಸಾಲ ಮರುಪಾವತಿಸಲು ಚೆಕ್ ನೀಡಿದ್ದಾರೆ ಎಂದರೆ ಸರಿಯಲ್ಲ.
15. ನೀವು ಸಹ ಯಾವುದೇ ಚೀಟಿ ಹಾಕಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.
16. ದೂರುದಾರರು ಬಟ್ಟೆ ವ್ಯಾಪಾರ ಹಾಗೂ ಇತರೆ ವ್ಯಾಪಾರ ಮಾಡುತ್ತಿದ್ದು ಯಾವುದೇ ಚೀಟಿ ವ್ಯಾಪಾರ ಮಾಡುವುದಿಲ್ಲ ಎಂದರೆ ಸರಿಯಲ್ಲ.
17. ದೂರುದಾರರು ವಿನಾಯಕ ಟೆಕ್ಸಟೈಲ್ಸ್ ಬಟ್ಟೆ ಅಂಗಡಿ ಇಟ್ಟುಕೊಂಡಿದ್ದಾರೆ ಎಂದರೆ ಸರಿಯಲ್ಲ. ಬೇರೆಯವರ ಬಟ್ಟೆ ಅಂಗಡಿಯಲ್ಲಿ ಕುಳಿತುಕೊಳ್ಳುತ್ತಿದ್ದರು, ಅಲ್ಲಿ ಚೀಟಿ ವ್ಯವಹಾರ ನಡೆಸುತ್ತಿದ್ದರು ಎಂದು ನುಡಿಯುತ್ತಾರೆ.
18. ಆರೋಪಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ - 1ರ ಚೆಕ್ ಆರೋಪಿಯದ್ದು ಎಂದರೆ ಸರಿ. ಸಹಿ ಮಾತ್ರ ಮಾಡಿದ್ದು ಯಾವುದೇ ಹಣ ನಮೂದು ಮಾಡಿರಲಿಲ್ಲ ಎಂದು ನುಡಿಯುತ್ತಾರೆ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ